

ಸಿನಿಮಾವನ್ನು ಜನರು ಈಗಲೂ ನೋಡಿ ನಗುತ್ತಿದ್ದಾರೆ. ಅಂದರೆ ನಾನು ಅಷ್ಟು ಅಡ್ವಾನ್ಸ್ ಆಗಿ ಯೋಚನೆ ಮಾಡಿ ಮಾಡಿದಿನಿ.

◆ **ಈಗ ಒಪ್ಪಿಕೊಂಡಿರುವ ಹೊಸ ಸಿನಿಮಾ ಬಗ್ಗೆ ಹೇಳಿ.**

ಕ್ರಿಸ್ಟಲ್ ಪಾರ್ಕ್ ಸಂಸ್ಥೆಯ ಚಂದ್ರಶೇಖರ್ ನಿರ್ಮಾಣ ಮಾಡುತ್ತಿರುವ ಹೊಸ ಸಿನಿಮಾ ಒಪ್ಪಿಕೊಂಡಿದ್ದೇನೆ. ತುಂಬ ಭಿನ್ನವಾದ ಕಥೆ. ನಾನು ನಗುವುದು ತುಂಬ ಅಪರೂಪ. ಈ ಸಿನಿಮಾ ಕಥೆ ಕೇಳಿ ಸಾಕಷ್ಟು ನಕ್ಕೆ. ‘ರಾಬರ್ಟ್’ ಸಿನಿಮಾಗೆ ಕಥೆ, ಸಂಭಾಷಣೆ ಬರೆದಿರುವ ರಾಜಶೇಖರ್ ಎನ್ನುವವರು ನಿರ್ದೇಶನ ಮಾಡುತ್ತಿದ್ದಾರೆ.

◆ **ನೀವು ನಿರ್ಮಾಪಕ, ವಿತರಕರೂ ಹೌದು. ಸದ್ಯ ಯಾವುದಾದರೂ ಸಿನಿಮಾ ನಿರ್ಮಾಣ ಮಾಡುವ ಆಲೋಚನೆ ಇದೆಯೇ?**

ಐದು ಸ್ಕ್ರಿಪ್ಟ್ ಸಿದ್ಧ ಮಾಡಿಟ್ಟುಕೊಂಡಿದ್ದೀನಿ. ಅದರಲ್ಲಿ ಒಂದು ಸಿನಿಮಾ ಚಿತ್ರೀಕರಣ ಈಗಾಗಲೇ ಶುರುಮಾಡಿದ್ದೀನಿ. ಅಂತರರಾಷ್ಟ್ರೀಯ ಮಟ್ಟದ ಸಿನಿಮಾ ಅದಾಗುತ್ತದೆ ಎಂಬ ನಂಬಿಕೆ ಇದೆ. ಅದರ ಹೂರಣ ಎಂಥದ್ದು ಎಂದು ಈಗಲೇ ಹೇಳುವುದಿಲ್ಲ. ಹಾಗೇನಾದರೂ ಸುಳಿವು ಕೊಟ್ಟುಬಿಟ್ಟರೆ ಕತ್ತಿ ಮಸೆಯುವವರಿಗೆ, ಹಲ್ಲು ಮಸೆಯುವವರಿಗೆಲ್ಲ ಹರಿತ ಮಾಡಿಕೊಳ್ಳಲು ಸಮಯ ಕೊಟ್ಟ ಹಾಗಾಗುತ್ತದೆ.

◆ **ನೀವು ಸೋಷಿಯಲ್ ಮೀಡಿಯಾದಲ್ಲಿ ಯಾಕಿಲ್ಲ?**

ನಾನು ಅಂತರ್ಮುಖಿ. ಸೋಷಿಯಲ್ ಮೀಡಿಯಾ ಅಥವಾ ಇನ್ಯಾವುದೇ ರೀತಿಯಲ್ಲಿ ಪ್ರಚಾರಕ್ಕಾಗಿ ಹಾತೊರೆಯುವವನಲ್ಲ. ಯಾರು ಕೇಳಿಕೊಂಡು ಬರ್ತಾರೋ, ಅವರು ಹೇಳುವ ಕಥೆ ಇಷ್ಟವಾದರೆ ಒಪ್ಪಿಕೊಂಡು ಮಾಡುತ್ತೇನೆ.

ಕೊರೊನಾ ಬಂದಾಗಲಿಂದ ನನಗೆ ಯಾರಿಗೂ ಸಿಕ್ಕಿಲ್ಲದಿರುವ ಸ್ವಾತಂತ್ರ್ಯ ಸಿಕ್ಕಿದೆ. ಕನ್ನಡಕ, ಟೋಪಿ, ಮಾಸ್ಕ್ ಹಾಕಿಕೊಂಡುಬಿಟ್ಟರೆ ನಾನು ಯಾರು ಅಂತ ಯಾರಿಗೂ ಗೊತ್ತಾಗುವುದಿಲ್ಲ. ಹಾಗಾಗಿ ನನ್ನಷ್ಟಕ್ಕೆ ನಾನು ಸಾಮಾನ್ಯ ಮನುಷ್ಯನ ಹಾಗೆ ಬ್ಯುಸಿನೆಸ್ ಮಾಡಿಕೊಂಡು ಆರಾಮವಾಗಿದ್ದೀನಿ.

ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ಟ್ವಿಟರ್ ಎಲ್ಲ ಕಡೆಗಳಲ್ಲಿ ಈವತ್ತು ಇಲ್ಲಿ ಕಾಫಿ ಕುಡಿದೆ, ಅಲ್ಲಿ ತಿಂಡಿ ತಿಂದೆ ಎಂದೆಲ್ಲ ಹಾಕಿಕೊಳ್ಳುತ್ತಿರುತ್ತಾರೆ. ಆದರೆ ನಾನು ಹೀಗೆ ನನ್ನ ಬಗ್ಗೆ ಯಾವತ್ತೂ ಹೇಳಿಕೊಂಡವನಲ್ಲ. ನಾನು ಗುಪ್ತಗಾಮಿನಿ ಥರ ಇರ್ತೀನಿ. ಕಲಾವಿದರು ಎಂದರೆ ಪರದೆ ಮೇಲೆ ಏನು ಮಾಡ್ತಾರೋ ಅಷ್ಟೆ. ನಕ್ಷತ್ರ ರಾತ್ರಿ ಹೊತ್ತಿಗೇ ಬರಬೇಕು; ಬೆಳಿಗ್ಗೆ ಹೊತ್ತಿಗೆ ಬಂದ್ರೆ ಟ್ಯೂಬ್‌ಲೈಟು ಅಂತಲೋ, ಸ್ಟ್ರೀಟ್ ಲೈಟು ಅಂತಲೋ ಅಂದ್ಕೊಂಡ್ಬಿಡ್ತಾರೆ ಜನ.

◆ **ಒಬ್ಬ ಕಲಾವಿದನಾಗಿ ‘ಹಾಸ್ಯನಟ’ ಎಂಬ ಹಣೆಪಟ್ಟಿಯಲ್ಲಿಯೇ ಇರುವುದು ಏಕತಾನ ಅನಿಸುವುದಿಲ್ಲವೇ?**

ನನ್ನ ಅಣ್ಣ ಜಗ್ಗೇಶ್ ಕನ್ನಡದ ಟಾಪ್ ಹಾಸ್ಯನಟ. ಅವರ ಹೋಲಿಕೆ ಇರುವ ನಾನು, ಅವರ ಸ್ಟೈಲ್ ಇರದ ಹಾಗೆ ಹೊಸ ಸ್ಟೈಲ್ ರೂಢಿಸಿಕೊಂಡು ಬೆಳೆದವನು. ಬರಹಗಾರ ಬರೆದಿದ್ದೇ ಬರೆಯುತ್ತಿದ್ದರೆ ಯಾರು ಓದುತ್ತಾರೆ? ಬೇರೆ ಬೇರೆ ರೀತಿಯ ಬರಹಗಳನ್ನು ಬರೆಯುತ್ತಿರಬೇಕು. ಪ್ರತಿಯೊಬ್ಬ ಸೃಜನಶೀಲ ವ್ಯಕ್ತಿಗೂ ಬದಲಾವಣೆ ಅನಿವಾರ್ಯ. ಸಿನಿಮಾ ಅಂದ ಮೇಲೆ ಮನರಂಜನೆ ಇರಬೇಕು, ಹಣ ಕೊಟ್ಟು ಬರುವ ಜನರಿಗೆ ಮೋಸ ಆಗಬಾರದು. ಅದಕ್ಕೆ ತಕ್ಕ ಹಾಗೆ ನಾವು ಸಿದ್ಧತೆ ಮಾಡಿಕೊಳ್ಳಬೇಕು ನಿಜ. ಆದರೆ ಇವರು ಹಾಲು ಕರೆಯುತ್ತಿದ್ದರು; ಸಾಯೋವರೆಗೂ ಹಾಲೇ ಕರೆಯುತ್ತಿರಬೇಕು. ಇವನು ಟೀ ಮಾರ್ತಾ ಇದ್ದ; ಸಾಯೋವರೆಗೂ ಟೀ ಮಾರ್ತಾನೇ ಇರ್ಬೇಕು ಅಂದ್ರೆ ಅವರು ಪ್ರಧಾನಮಂತ್ರಿ ಆಗೋಕೆ ಆಗಲ್ಲ.

ನನ್ನ ಜೀವನದಲ್ಲಿ ನಾನು ಇಡುವ ಒಂದೊಂದು ಹೆಜ್ಜೆ ಕೂಡ ನನಗೆ ಖುಷಿಕೊಡಬೇಕು. ನನ್ನ ಒಳಮನಸ್ಸು ಶಹಬಾಶ್ ಎನ್ನಬೇಕು. ಹಾಗಂತ ಸುಮ್ ಸುಮ್ನೆ ಶಹಬಾಶ್ ಎಂದರೆ ತಿಕ್ಲ ಅಂದ್ಕೋತಾರೆ! ಹಾಗೆ ಅನಿಸುವ ಹಾಗೆ ನಾವು ಹೆಜ್ಜೆ ಇಡಬೇಕು. ಒಬ್ಬ ಕಲಾವಿದನ ಒಳಮರ್ಮ ಜನರಿಗೆ ಅರ್ಥ ಆಗಬಾರದು. ಏನು ಕೊಟ್ಟರೂ ಮಾಡ್ತಾನೆ ಅನ್ನುವ ಹಾಗೆ ಇರಬೇಕು. ಆಗಲೇ ಅವನು ಬಹುಕಾಲ ಜನರ ಮನಸಲ್ಲಿ ಉಳಿದುಕೊಳ್ಳುವುದು. ■



## ಕ್ರೈಮ್ ‘ಮಾರ್ಗ’ದಲ್ಲಿ ಚೇತನ್



ಜನಪರ ಹೋರಾಟ, ಚಿತ್ರರಂಗದಲ್ಲಿರುವ ಕಾಸ್ಟಿಂಗ್ ಕೌಚ್ ಮತ್ತು ಇನ್ನಿತರ ಶೋಷಣೆಗಳ ವಿರುದ್ಧ ಧ್ವನಿಯೆತ್ತಿದ ನಟ ಚೇತನ್ ಕ್ರೈಮ್ ಮಾರ್ಗ ಹಿಡಿದಿದ್ದಾರೆ. ಇದೇನು ಹೀಗೆ? ಅಪರಾಧಗಳನ್ನು ವಿರೋಧಿಸುತ್ತಿದ್ದವರೇ ಅಪರಾಧದ ಮಾರ್ಗ ಹಿಡಿದರೇ ಎಂದು ಅಚ್ಚರಿಗೊಳ್ಳಬೇಡಿ. ಚೇತನ್ ಈ ಮಾರ್ಗಕ್ಕೆ ಇಳಿದಿರುವುದು ತೆರೆಯ ಮೇಲೆ.

ಹೌದು, ಚೇತನ್ ನಾಯಕನಾಗಿ ನಟಿಸುತ್ತಿರುವ ‘ಮಾರ್ಗ’ ಎಂಬ ಸಿನಿಮಾದ ಮುಹೂರ್ತ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದಿದೆ. ಈ ಮಾರ್ಗಕ್ಕೂ ಕ್ರೈಮ್‌ಗೂ ಏನು ಸಂಬಂಧ? ಸಂಬಂಧ ಇದೆ. ಇದು ಒಂದು ಕ್ರೈಮ್ ಥ್ರಿಲ್ಲರ್ ಸಿನಿಮಾ. ಮಾರ್ಗಕ್ಕೆ ಎರಡು ಅಂಚುಗಳು ಇರುವಂತೆ ಈ ಚಿತ್ರದ ನಾಯಕನಿಗೂ ಇಬ್ಬರು ನಾಯಕಿಯರು ಇರಲಿದ್ದಾರೆ. ಒಂದು ಪಾತ್ರದಲ್ಲಿ ‘ದಿಯಾ’ ಸಿನಿಮಾ ಖ್ಯಾತಿಯ ಖುಷಿ ನಟಿಸುತ್ತಿದ್ದರೆ, ಇನ್ನೊಂದು ಪಾತ್ರದಲ್ಲಿ ಗ್ರೀಷ್ಮಾ ನಾಣಯ್ಯ ಕಾಣಿಸಿಕೊಳ್ಳಲಿದ್ದಾರೆ.

ಮೋಹನ್ ಎನ್ನುವವರು ಈ ಸಿನಿಮಾದ ಮೂಲಕ ನಿರ್ದೇಶಕನಾಗಿ ಪರಿಚಿತರಾಗುತ್ತಿದ್ದಾರೆ. ‘ಪ್ರತಿಯೊಬ್ಬರಿಗೂ ಬದುಕಿನಲ್ಲಿ ಒಂದು ಗುರಿ ಇರುತ್ತದೆ. ಈ ಚಿತ್ರದ ನಾಯಕ ಮತ್ತು ನಾಯಕಿಗೂ ಒಂದು ಗುರಿ ಇದೆ. ಅವರು ಅದನ್ನು ತಲುಪಲು ಹೊರಟಾಗ ಮಾರ್ಗದಲ್ಲಿ ಎದುರಾಗುವ ಸವಾಲುಗಳೇ ಈ ಚಿತ್ರದ ಹೂರಣ’ ಎನ್ನುತ್ತಾರೆ ನಿರ್ದೇಶಕರು. ‘ಹಾಗಂತ ಇದು ರೋಡ್ ಸ್ಟೋರಿ ಅಲ್ಲ. ಈ ಸಿನಿಮಾದಲ್ಲಿ ತಾಂತ್ರಿಕತೆಗೂ ಅಷ್ಟೇ ಮಹತ್ವವಿದೆ. ತನ್ನ ಗುರಿ ಸಾಧಿಸಿಕೊಳ್ಳಲು ನಾಯಕ ಯಾವ ಮಾರ್ಗ ಹಿಡಿಯುತ್ತಾನೆ ಎಂಬುದೇ ಸಿನಿಮಾದ ತಿರುಳು’ ಎನ್ನುವುದು ಚೇತನ್ ಮಾತು.

ಬಹುತೇಕ ಸಿನಿಮಾವನ್ನು ಬೆಂಗಳೂರಿನ ಸುತ್ತಮುತ್ತಲೇ ಚಿತ್ರೀಕರಿಸಿ ಮತ್ತೆ ಕೆಲವು ದೃಶ್ಯಗಳಿಗೆ ಚಿಕ್ಕಮಗಳೂರಿನ ತಾಣಗಳಿಗೆ ತೆರಳುವ ಯೋಜನೆ ಚಿತ್ರತಂಡದ್ದು. ಚಿತ್ರದ ಮೂರು ಹಾಡುಗಳಿಗೆ ಅಜನೀಶ್ ಲೋಕನಾಥ್ ಸಂಗೀತದ ಮಟ್ಟುಗಳನ್ನು ಕಟ್ಟಲಿದ್ದಾರೆ.

ಚಿತ್ರ: ಕೆ.ಎನ್. ನಾಗೇಶ್‌ಕುಮಾರ್